ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ    ದಿನಾಂಕ : DATE : 14/07/2019

# ಸ್ಪೀಕರ್ ವಿರುದ್ಧ ಮತ್ತೆ 5 ಅತೃಪ್ತರು ಸುಪ್ರೀಂಗೆ

## ನಾವು ಕ್ರಮಬದ್ಧವಾಗಿ ರಾಜೀನಾಮೆ ನೀಡಿದ್ದೇವೆ | ಸ್ಪೀಕರ್ ಅಂಗೀಕರಿಸಿಲ್ಲ ನಮ್ಮ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ | ಅರ್ಜಿಯಲ್ಲಿ ಉಲ್ಲೇಖ

• **ಕನ್ನಡಪ್ರಭ ವಾರ್ತೆ** ನವದೆಹಲಿ 14/7/19


ಸ್ಪೀಕರ್ ಪಕ್ಷಪಾತಿಯಾಗಿ ನಡೆದುಕೊಳ್ಳುತ್ತಿದ್ದಾರೆಂದು ಆರೋಪಿಸಿ ಹತ್ತು ಮಂದಿ ಕಾಂಗ್ರೆಸ್, ಜೆಡಿಎಸ್ ಶಾಸಕರು ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಯುತ್ತಿರುವ ಹೊತ್ತಿನಲ್ಲೇ ಈಗ ಮತ್ತೆ ಐವರು ಅತೃಪ್ತ ಶಾಸಕರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ತಮ್ಮ ರಾಜೀನಾಮೆ ಕ್ರಮಬದ್ಧವಾಗಿದ್ದರೂ ಸ್ಪೀಕರ್ ಅದನ್ನು ಅಂಗೀಕರಿಸಿಲ್ಲ ಎಂದು ಆರೋಪಿಸಿರುವ ಅವರು, ಉಳಿದ ಶಾಸಕರು ಸಲ್ಲಿಸಿರುವ ಮೂಲ ಅರ್ಜಿಯೊಂದಿಗೇ



ತಮ್ಮ ಅರ್ಜಿ ವಿಚಾರಣೆಯನ್ನೂ ನಡೆಸುವಂತೆ ಕೋರಿಸಿದ್ದಾರೆ. ಇದರೊಂದಿಗೆ ರಾಮಲಿಂಗಾ ರೆಡ್ಡಿ ಹೊರತುಪಡಿಸಿ ಉಳಿದೆಲ್ಲ ಅತೃಪ್ತ ಶಾಸಕರು ರಾಜೀನಾಮೆ ಅಂಗೀಕಾರಕ್ಕಾಗಿ ಸುಪ್ರೀಂ ಕೋರ್ಟ್ ಕದತಟ್ಟಿದಂತಾಗಿದೆ.

ಶಾಸಕರಾದ ಪ್ರತಾಪ್ ಗೌಡ ಪಾಟೀಲ್, ರಮೇಶ್ ಜಾರಕಿಹೊಳಿ, ಬೈರತಿ ಬಸವರಾಜು, ಬಿ.ಸಿ.ಪಾಟೀಲ್, ಶಿವಾರಾಂ ಹೆಬ್ಬಾರ್, ಎಸ್.ಟಿ. ಸೋಮಶೇಖರ್, ಎಚ್.ವಿಶ್ವನಾಥ್, ಮಹೇಶ್ ಕುಮಟಳ್ಳಿ, ಕೆ.ಗೋಪಾಲಯ್ಯ, ನಾರಾಯಣ ಗೌಡ ಅವರು ತಮ್ಮ ರಾಜೀನಾಮೆಯನ್ನು ಸ್ವೀಕರಿಸುವಂತೆ ಸ್ಪೀಕರ್‌ಗೆ ಸೂಚಿಸಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಅದರ ವಿಚಾರಣೆ ಈಗಾಗಲೇ ನಡೆಯುತ್ತಿದೆ. ಅದರ ಬೆನ್ನಲ್ಲೇ ಈಗ ಮತ್ತೆ ಐವರು ಅತೃಪ್ತ ಶಾಸಕರಾದ ಎಂ.ಟಿ.ಬಿ. ನಾಗರಾಜ್, ಸುಧಾಕರ್, ರೋಷನ್ ಬೇಗ್, ಮುನಿರತ್ನ ಮತ್ತು ಆನಂದ್ ಸಿಂಗ್ ಅವರು ಶನಿವಾರ ಮಧ್ಯಂತರ ಅರ್ಜಿ ಸಲ್ಲಿಸಿದ್ದಾರೆ

➘ 5



1. I am conversant with the facts and events leading up to swearing of this affidavit. The present affidavit is filed out of my free will and volition.
2. I state that I was elected as a Member of Karnataka Legislative Assembly in the elections held during May, 2018 from Indian National Congress Party.
3. I state that on 09.07.2019, I have rendered my resignation voluntarily as a Member of Karnataka Legislative Assembly which has been addressed to the Hon'ble Speaker of the Legislative Assembly. I have personally appeared before the Speaker who was present in the office at that time when I had ... I had also made it clear to him that I have tender...

### ಅರ್ಜಿಯಲ್ಲೇನಿದೆ?

1. ನಾವು ಕ್ರಮಬದ್ಧವಾಗಿ, ಖುದ್ದಾಗಿ, ಸ್ವಇಚ್ಛೆಯಿಂದ, ಸ್ವಹಸ್ತಾಕ್ಷರದಿಂದ ರಾಜೀನಾಮೆ ನೀಡಿದ್ದರೂ ಸ್ಪೀಕರ್ ಅದನ್ನು ಅಂಗೀಕರಿಸಿಲ್ಲ
2. ಖುದ್ದು ಹಾಜರಾಗಿ ರಾಜೀನಾಮೆ ನೀಡಿದ್ದು ಸ್ವಇಚ್ಛೆಯಿಂದ ನೀಡಿರುವ ರಾಜೀನಾಮೆ ಮತ್ತು ನಮ್ಮ ರಾಜೀನಾಮೆ ಪತ್ರ ನೈಜ ಎಂಬುದಕ್ಕೆ ಸಾಕ್ಷಿ
3. ರಾಜ್ಯದ ಸಮ್ಮಿಶ್ರ ಸರ್ಕಾರದ ದುರಾಡಳಿತದಿಂದ ನಿರಾಸೆಗೊಂಡು ವಿಧಾನಸಭಾ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿದ್ದೇವೆ
4. ಆದರೆ, ಸಮ್ಮಿಶ್ರ ಸರ್ಕಾರವನ್ನು ಉಳಿಸಲು, ನಮ್ಮ ರಾಜೀನಾಮೆ ಅಂಗೀಕರಿಸದಿರುವಂತೆ ಸ್ಪೀಕರ್ ಮೇಲೆ ಒತ್ತಡ ಹೇರಿರುವ ಅನುಮಾನವಿದೆ
5. ಇದರಿಂದ ಅನಿವಾರ್ಯವಾಗಿ ಶಾಸಕ ಸ್ಥಾನದಲ್ಲಿ ಮುಂದುವರಿದು ನಮ್ಮ ಇಚ್ಛೆಯ ವಿರುದ್ಧವಾಗಿ ಸರ್ಕಾರವನ್ನು ಬೆಂಬಲಿಸಬೇಕಾಗುತ್ತದೆ

## ಅತೃಪ್ತ ಶಾಸಕರಿಗೆ ವಿಪ್ ಅನ್ವಯಿಸಲ್ಲ

### ಮಾಜಿ ಅಟಾರ್ನಿ ಜನರಲ್ ಮುಕುಲ್ ರೋಹಟ್ಗಿ ಹೇಳಿಕೆ

• **ಕನ್ನಡಪ್ರಭ ವಾರ್ತೆ** ನವದೆಹಲಿ

ರಾಜೀನಾಮೆ ನೀಡಿರುವ ಶಾಸಕರ ರಾಜೀನಾಮೆ ಅಂಗೀಕಾರ ಅಥವಾ ನಿರಾಕರಣೆ ಮತ್ತು ಅನರ್ಹತೆ ಬಗ್ಗೆ ಯಾವುದೇ ನಿರ್ಧಾರ ಕೈಗೊಳ್ಳುವಂತಿಲ್ಲ ಎಂದು ಸ್ಪೀಕರ್‌ಗೆ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನ ವಿಪ್‌ಗೂ ಅನ್ವಯಿಸಲಿದೆ ಎಂದು ಅತೃಪ್ತರ ಪರ ಹಿರಿಯ ವಕೀಲ, ಕೇಂದ್ರ ಸರ್ಕಾರದ ಮಾಜಿ ಅಟಾರ್ನಿ ಜನರಲ್ ಮುಕುಲ್ ರೋಹಟ್ಗಿ ಕಾನೂನು ಅಭಿಪ್ರಾಯ ನೀಡಿದ್ದಾರೆ.

ಅತೃಪ್ತ ಶಾಸಕರಿಗೆ ನೀಡಿರುವ ಕಾನೂನು ಅಭಿಪ್ರಾಯದಲ್ಲಿ ರೋಹಟ್ಗಿ ಅವರು, ನಾನು ನನ್ನ ವಾದ ಮಂಡನೆ ಸಂದರ್ಭದಲ್ಲಿ ವಿಪ್ ಬಗ್ಗೆ ಉಲ್ಲೇಖಿಸಿದ್ದೆ. ವಿಪ್ ಬಗ್ಗೆ ಸುಪ್ರೀಂ ಕೋರ್ಟ್ ದಾಖಲೆಗಳಲ್ಲಿ ಉಲ್ಲೇಖವಾಗಿದೆ. ಶಾಸಕರ ಅನರ್ಹತೆ ಬಗ್ಗೆ ನಿರ್ಧಾರ ಕೈಗೊಳ್ಳಬೇಡಿ ಎಂದು ಸ್ಪೀಕರ್‌ಗೆ ನೀಡಿರುವ ನಿರ್ದೇಶನ ವಿಪ್ ಅನ್ನು ಕೂಡ ಒಳಗೊಳ್ಳುತ್ತದೆ ಎಂದು ತಿಳಿಸಿದ್ದಾರೆ.

3


# ಸ್ಪೀಕರ್ ವಿರುದ್ಧ ಮತ್ತೆ 5 ಅತೃಪ್ತರು ಸುಪ್ರೀಂಗೆ

16/7/19

◄ ಮೊದಲ ಪುಟದಿಂದ

ಹತ್ತು ಮಂದಿ ಶಾಸಕರು ಸಲ್ಲಿಸಿದ ಮೂಲ ಅರ್ಜಿಯೊಂದಿಗೆ ತಮ್ಮ ಅರ್ಜಿಯನ್ನೂ ವಿಚಾರಣೆ ನಡೆಸಬೇಕು ಎಂದು ಮನವಿ ಮಾಡಿದ್ದಾರೆ. ಕಾಂಗ್ರೆಸ್ ನಾಯಕರಾದ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಅವರೊಂದಿಗೆ ಮಾತುಕತೆ ನಡೆಸುತ್ತಿರುವ ನಡುವೆಯೇ ಎಂ.ಟಿ.ಬಿ.ನಾಗರಾಜ್ ಕೂಡ ತಮ್ಮ ರಾಜೀನಾಮೆ ಅಂಗೀಕರಿಸುವಂತೆ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದು ತೀವ್ರ ಕುತೂಹಲ ಮೂಡಿಸಿದೆ. ಈ ಅರ್ಜಿಗಳನ್ನು ಗಮನಿಸಿದರೆ ಅತೃಪ್ತ ಶಾಸಕರ ಮನವೊಲಿಸುವಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಸದ್ಯದ ಮಟ್ಟಿಗೆ ವಿಫಲರಾಗಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

ಐವರು ಶಾಸಕರ ಅರ್ಜಿಯಲ್ಲಿ ಏನಿದೆ?: ನಾವು ನೀಡಿರುವ ರಾಜೀನಾಮೆ ಸಂವಿಧಾನದ 190ನೇ ವಿಧಿ ಮತ್ತು ಕರ್ನಾಟಕ ವಿಧಾನಸಭೆಯ ನಡಾವಳಿ ನಿಯಮ 202ರ ಪ್ರಕಾರವೇ ಇದೆ. ನಾವು ಸ್ಪೀಕರ್ ಅವರನ್ನು ಖುದ್ದು ಭೇಟಿಯಾಗಿ ರಾಜೀನಾಮೆ ನೀಡಿದರೂ ಸ್ಪೀಕರ್ ಅದನ್ನು ಅಂಗೀಕರಿಸಿಲ್ಲ. ನಮ್ಮಲ್ಲಿ ಒಬ್ಬರು ಜು.1ಕ್ಕೆ ರಾಜೀನಾಮೆ ನೀಡಿದರೂ ಈ ಬಗ್ಗೆ ಸ್ಪೀಕರ್ ತೀರ್ಮಾನ ತೆಗೆದುಕೊಂಡಿಲ್ಲ. ನಾವು ಖುದ್ದಾಗಿ ಸ್ಪೀಕರ್‌ರನ್ನು ಭೇಟಿಯಾಗಿ ರಾಜೀನಾಮೆ ನೀಡಿರುವುದು ನಮ್ಮ ರಾಜೀನಾಮೆ ಸ್ವಇಚ್ಛೆಯಿಂದ ನೀಡಿದ್ದು ಮತ್ತು ನೈಜವಾದದ್ದು ಎಂಬುದನ್ನು ಹೇಳುತ್ತದೆ. ಆದ್ದರಿಂದ ಸಂವಿಧಾನದ 190ನೇ ವಿಧಿಯಡಿ ಮುಂದಿನ ವಿಚಾರಣೆ ಅಗತ್ಯವಿಲ್ಲ.



ಸಂವಿಧಾನದ 190(3)(ಬಿ) ವಿಧಿ ಕೇವಲ ಮಾಹಿತಿ ಕೇಳುವ ಅಧಿಕಾರವನ್ನು ಸ್ಪೀಕರ್‌ಗೆ ನೀಡಿದೆಯೇ ಹೊರತು ತನಿಖೆಯ ಅಧಿಕಾರವನ್ನಲ್ಲ. ಆದ್ದರಿಂದ ರಾಜೀನಾಮೆ ವಿಚಾರದಲ್ಲಿ ವಿವರವಾದ ವಿಚಾರಣೆಯ ಅಗತ್ಯವಿಲ್ಲ. ಈ ಮಾಹಿತಿ ಕೇಳುವ ಪ್ರಕ್ರಿಯೆ ಕೇವಲ ರಾಜೀನಾಮೆ ಸ್ವಂತ ಇಚ್ಛೆಯಿಂದ ನೀಡಿದ್ದೇ ಅಥವಾ ನೈಜವಾದದ್ದೇ ಎಂಬುದಕ್ಕಷ್ಟೇ ಸೀಮಿತವಾಗಿದೆ. ಶಾಸಕ ಸ್ವಇಚ್ಛೆಯಿಂದ ರಾಜೀನಾಮೆ ನೀಡಿದ್ದು ಎಂದು ಹೇಳಿದರೆ ಮುಂದಿನ ತನಿಖೆಯ ಅಗತ್ಯವಿಲ್ಲ. ಒಬ್ಬ ಶಾಸಕ ಸ್ವಹಸ್ತಾಕ್ಷರದಿಂದ ಖುದ್ದಾಗಿ ರಾಜೀನಾಮೆ ನೀಡಿದ್ದೇ ಆದರೆ ಅದು ನೈಜವೇ ಆಗಿರುತ್ತದೆ. ಆ ಬಳಿಕ ತನಿಖೆಯ ಅಗತ್ಯವಿಲ್ಲ. ಈ ಹಿನ್ನೆಲೆಯಲ್ಲಿ ಸಂವಿಧಾನದ 190ನೇ ವಿಧಿ ಅಥವಾ ಕರ್ನಾಟಕ ವಿಧಾನಸಭೆಯ ನಡಾವಳಿ 202ರಡಿ ಪ್ರಕ್ರಿಯೆಗಳು ಬೇಕಾಗಿಲ್ಲ ಎಂದು ಐವರು ಅತೃಪ್ತ ಶಾಸಕರು ಅರ್ಜಿಯಲ್ಲಿ ಹೇಳಿಕೊಂಡಿದ್ದಾರೆ.

ನಮ್ಮ ಮೇಲೆ ರಾಜೀನಾಮೆ ನೀಡಿದ ಸಂದರ್ಭದಲ್ಲಿ ಯಾವುದೇ ಅನರ್ಹತೆಯ ದೂರುಗಳಿರಲಿಲ್ಲ. ಆದ್ದರಿಂದ ಅನರ್ಹತೆಯ ದೂರಿನ ವಿಚಾರಣಾ ಪ್ರಕ್ರಿಯೆ ಬಾಕಿಯದೆ ಎಂಬುದು ನಮ್ಮ ರಾಜೀನಾಮೆಯ ಹಕ್ಕಿಗೆ ಅಡ್ಡಿಯಾಗುವುದಿಲ್ಲ. ನಮ್ಮ ಮೇಲೆ ಕಾಂಗ್ರೆಸ್ ಪಕ್ಷ ನೀಡಿರುವ ಅನರ್ಹತೆಯ ದೂರಿಗೆ ಯಾವುದೇ ಆಧಾರವಿಲ್ಲ. ಸದನದ ಹೊರಗೆ ನಡೆದಿರುವ ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಭಾಗಿಯಾಗಿಲ್ಲ ಎಂಬ ಕಾರಣಕ್ಕೆ ಶಾಸಕರನ್ನು ಅನರ್ಹಗೊಳಿಸುವಂತೆ ಕೋರಲಾಗಿದೆ. ಇದು ಅನರ್ಹತೆಗೆ ಕಾರಣವಾಗುವುದಿಲ್ಲ.

ಸುಪ್ರೀಂ ಕೋರ್ಟ್ ಜು.11ರಂದು ಅಂದಿನ ದಿನ ಮುಗಿಯುವ ಮೊದಲು ತನ್ನ ಮುಂದೆ ಬಂದಿರುವ 10 ಶಾಸಕರು ರಾಜೀನಾಮೆ ನೀಡಿದ್ದೇ ಆದರೆ ಅವರ ಬಗ್ಗೆ ನಿರ್ಧಾರ ತೆಗೆದುಕೊಂಡು ಮರುದಿನ (ಜು.12) ತನಗೆ ತಿಳಿಸಬೇಕು ಎಂದು ನೀಡಿದ್ದ ಆದೇಶದ ಲಾಭ ನಮಗೂ ಸಿಗಬೇಕು. ಜು.10 ರಂದು ಸ್ಪೀಕರ್ ಕಚೇರಿಗೆ ರಾಜೀನಾಮೆ ನೀಡಲು ಹೋದ ಸಂದರ್ಭದಲ್ಲಿ ನಮ್ಮಲ್ಲಿ ಕೆಲವರ ಮೇಲೆ ಹಲ್ಲೆಯಾಗಿದೆ. ವಿಧಾನಸಭೆಯೊಳಗಿನಿಂದ ಅವರನ್ನು ಪೊಲೀಸರು ರಕ್ಷಿಸಿದ್ದಾರೆ ಎಂದು ನ್ಯಾಯಾಲಯಕ್ಕೆ ಐವರು ಶಾಸಕರು ತಿಳಿಸಿದ್ದಾರೆ.

ಅನರ್ಹತೆ ಪ್ರಕ್ರಿಯೆಯನ್ನು ಶಾಸಕರನ್ನು ಬೆದರಿಸಲು ಬಳಸಲಾಗುತ್ತದೆ. ಒಂದೆಡೆ ಸ್ಪೀಕರ್ ರಾಜೀನಾಮೆಯನ್ನು ಅಂಗೀಕರಿಸುತ್ತಿಲ್ಲ. ಇನ್ನೊಂದೆಡೆ ಆಡಳಿತಾರೂಢ ಪಕ್ಷ ವಿಪ್ ಹೊರಡಿಸಿ ಜು.12ರಿಂದ ಪ್ರಾರಂಭಗೊಳ್ಳುವ ವಿಧಾನಸಭಾ ಅಧಿವೇಶನದಲ್ಲಿ ಭಾಗಿಯಾಗದಿರುವ ಶಾಸಕರನ್ನು ಅನರ್ಹಗೊಳಿಸುವ ಬೆದರಿಕೆ ಒಡ್ಡುತ್ತದೆ. ನಾವು ನಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರೂ ಅನರ್ಹತೆಯ ಭೀತಿ ಸೃಷ್ಟಿಸಿ ಸರ್ಕಾರಕ್ಕೆ ಬೆಂಬಲ ನೀಡಬೇಕು ಎಂಬ ಒತ್ತಡ ಸೃಷ್ಟಿಸುತ್ತಿದ್ದಾರೆ.

ನಮಗೂ ಅನರ್ಹತೆ ಮತ್ತು ರಾಜೀನಾಮೆ ಅಂಗೀಕಾರ ಅಥವಾ ನಿರಾಕರಣೆ ಬಗ್ಗೆ ಸ್ಪೀಕರ್‌ಗೆ ನೀಡಿರುವ ಯಥಾಸ್ಥಿತಿ ಆದೇಶವನ್ನು ಅನ್ವಯಿಸಿ. ಶಾಸಕಾಂಗದ ಯಾವುದೇ ಚುನಾಯಿತ ಪ್ರತಿನಿಧಿಗೆ ತನ್ನ ವಿವೇಚನೆಯಂತೆ ಅಥವಾ ಇನ್ನಿತರ ಸನ್ನಿವೇಶಕ್ಕೆ ಅನುಗುಣವಾಗಿ ತನ್ನ ಶಾಸಕಾಂಗದ ಸದಸ್ಯತ್ವಕ್ಕೆ ರಾಜೀನಾಮೆ ನೀಡುವ ಹಕ್ಕಿದೆ. ರಾಜೀನಾಮೆ ನೀಡುವುದು ಪ್ರಜೆಗಳ ಮೂಲಭೂತ ಹಕ್ಕು. ಸ್ಪೀಕರ್ ಅವರ ನಡೆ ನಮ್ಮ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ ಎಂದು ಈಗ ಐದು ಶಾಸಕರು ಸಲ್ಲಿಸಿರುವ ಅರ್ಜಿಯಲ್ಲಿ ಹೇಳಲಾಗಿದೆ. ಈ ಅರ್ಜಿಯೂ ಮಂಗಳವಾರ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬರುವ ಸಾಧ್ಯತೆ ಹೆಚ್ಚಿದೆ.